ಇದಕ್ಕೂ ಸ್ವಲ್ಪ ಮುಂಚೆ ಆಕೆ ತನ್ನ ಹ್ಯಾಂಡ್‌ಬ್ಯಾಗಿನಿಂದ ಚಿಕ್ಕ ಬಾಟಲೊಂದನ್ನು ತೆಗೆದು ಕಣ್ಣೊಳಗೆ ಡ್ರಾಪ್ಸ್ ಹಾಕಿಕೊಂಡಳು.

ಈಗ ಆಕೆ ಅಳುತಿದ್ದಾಳಾ, ಅಳುವುದಕ್ಕೆ ಸಿದ್ಧವಾಗಿದ್ದಾಳಾ ಅಥವಾ ಮಾಮೂಲಾಗಿ ಇದ್ದಾಳಾ ಎನ್ನುವುದನ್ನು ಅರ್ಥ ಮಾಡಿಕೊಳ್ಳುವುದು ಕಷ್ಟ .

ಸಹಜವಾದುದೋ ಕೃತಕವಾದುದೋ ತಿಳಿಯದ ನೀರಪಸೆಯೊಂದಿಗೆ ಆಕೆಯ ಕಣ್ಣುಗಳು ನನ್ನನ್ನೂ ಅಯ್ಯಪ್ಪನನ್ನೂ ಮತ್ತೆ ಮತ್ತೆ ನೋಡಿದವು.

ಅಯ್ಯಪ್ಪ ಏನೋ ತಪ್ಪು ಮಾಡಿದವನಂತೆ ಸ್ವಲ್ಪ ಬಗ್ಗಿ ನಿಂತು, 'ಅದು ಹಾಗಲ್ಲರಿ, ನಮ್ಮದು ಮೊದಲೇ ಸಿನಿಮಾ ಫೀಲ್ಡು. ಯಾವ ದಿನ ಯಾವ ರೆಕಾರ್ಡಿಂಗ್ ಥೇಟರೊಳಗಿರ್ತೀವೋ ನಮಗೇ ಗೊತ್ತಿರಲ್ಲ. ನಿರ್ದಿಷ್ಟ ಟೈಮಿಂಗ್ ಅಂತಲೇ ಇರಲ್ಲ. ಒಂದೊಂದ್ಸಲ ಓವರ್ ಕಾಲ್‌ಶೀಟ್ಸ್ ಬೀಳ್ತವೆ. ಹೊರಗಿನ ಪ್ರೋಗ್ರಾಮುಗಳೂ ಇರ್ತವೆ. ನಿಮ್ಮ ಹುಡುಗನಿಗೆ ಕಲಿಸಬೇಕೆಂದರೆ ನಾನು ಒಂದು ದಿವಸಕ್ಕೋ, ಒಂದು ಟೈಮಿಗೋ ಫಿಕ್ಸ್ ಆಗಬೇಕು. ಯಾವ ರೀತಿಯಿಂದ ನೋಡಿದರೂ ಅದು ಮ್ಯಾಚ್ ಆಗದು. ಇಫ್ ಯೂ ಡೋಂಟ್ ಮೈಂಡ್ ಮತ್ಯಾರಾದರೂ ಇದ್ದಾರೇನೋ ನೋಡತೀರಾ? ದೊಡ್ಡ ಸಮಸ್ಯೆಯೇನಲ್ಲ. ತುಂಬಾ ಈಜಿಯಾಗಿ ಸಿಗ್ತಾರೆ' ಅಂದ.

